UDAYAKALA
Wednesday, December 25, 2024

# ಒಣ ಮೆಣಸಿನಕಾಯಿ ಮಾರುಕಟ್ಟೆ ಪ್ರಾರಂಭಿಸಲು ಆಗ್ರಹ

## ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ನೇತೃತ್ವದಲ್ಲಿ ಎಪಿಎಂಸಿ ಬಂದ್, ಪ್ರತಿಭಟನೆ

ಉದಯಕಾಲ ನ್ಯೂಸ್

**ಬಳ್ಳಾರಿ:** ಬಳ್ಳಾರಿಯಲ್ಲಿ ಒಣ ಮೆಣಸಿನಕಾಯಿ ಮಾರುಕಟ್ಟೆ ಪ್ರಾರಂಭಿಸಲು ಆಗ್ರಹಿಸಿ ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ನೇತೃತ್ವದಲ್ಲಿ ವಿವಿಧ ಸಂಘಟನೆಗಳ ಸಹಭಾಗಿತ್ವದಲ್ಲಿ ಎಪಿಎಂಸಿ ಬಂದ್ ಮಾಡಿ, ನಗರದಲ್ಲಿ ಪ್ರತಿಭಟನೆ ನಡೆಸಿ ಜಿಲ್ಲಾಡಳಿತದ ಮೂಲಕ ಮುಖ್ಯಮಂತ್ರಿಗಳಿಗೆ ಮಂಗಳವಾರ ಮನವಿ ಸಲ್ಲಿಸಲಾಯಿತು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರಾದ ಯಶವಂತರಾಜ್ ನಾಗಿರೆಡ್ಡಿ ಅವರು ಪ್ರತಿಭಟನೆಯ ನೇತೃತ್ವ ವಹಿಸಿ, ಬಳ್ಳಾರಿಯಲ್ಲಿ ಒಣ ಮೆಣಸಿನಕಾಯಿ ಮಾರುಕಟ್ಟೆಯನ್ನು ಪ್ರಾರಂಭಿಸಲು ಬಿ.ಎಸ್. ಯಡಿಯೂರಪ್ಪ ಅವರ ಸರಕಾರ 23.25 ಎಕರೆ ಭೂಮಿಯನ್ನು ಮಂಜೂರು ಮಾಡಿ ಬಜೆಟ್‌ನಲ್ಲಿ 100 ಕೋಟಿ ರೂಪಾಯಿ ಅನುದಾನವನ್ನು ನೀಡಿತ್ತು. ನಾವು, ಹೊಸ ಬೇಡಿಕೆಯನ್ನ ಸರ್ಕಾರಕ್ಕೆ ಸಲ್ಲಿಸುತ್ತಿಲ್ಲ. ಐದು ವರ್ಷಗಳ ಹಿಂದೆ ಬಜೆಟ್‌ನಲ್ಲಿ ಘೋಷಣೆ ಆಗಿರುವ 'ಅತ್ಯಾಧುನಿಕ ಒಣ ಮೆಣಸಿನಕಾಯಿ ಮಾರುಕಟ್ಟೆ'ಯನ್ನು ಕೇಳುತ್ತಿದ್ದೇವೆ ಎಂದರು.

ಬೆಳಗಾವಿಯಲ್ಲಿ ನಡೆದ ಸದನದಲ್ಲಿ ಈ ಬಗ್ಗೆ ಪ್ರಶ್ನಿಸಿದಾಗ, ಪಿಪಿಪಿ ಮಾದರಿಯಲ್ಲಿ ಬಳ್ಳಾರಿಯಲ್ಲಿ ಒಣ ಮೆಣಸಿನಕಾಯಿ ಮಾರುಕಟ್ಟೆಯನ್ನು ನಿರ್ಮಿಸಲು ಸಾಧ್ಯವಿಲ್ಲ. ನಬಾರ್ಡ್ ಒಣ ಮೆಣಸಿನಕಾಯಿ ಮಾರುಕಟ್ಟೆ ನಿರ್ಮಾಣಕ್ಕೆ ಹಣ ನೀಡುವುದಿಲ್ಲ ಎಂದು, ಕೋಲ್ಡ್ ಸ್ಟೋರೇಜ್‌ಗಳ ನಿರ್ಮಾಣಕ್ಕೆ ಹಣ ನೀಡುವುದಾಗಿ ತಿಳಿಸಿದೆ.




ಕಾರಣ ಹಾಲಿ ಎಪಿಎಂಸಿಯಲ್ಲಿಯೇ ಒಣ ಮೆಣಸಿನಕಾಯಿ ಮಾರುಕಟ್ಟೆ ಪ್ರಾರಂಭಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದು ಸರ್ಕಾರ ಉತ್ತರ ನೀಡಿದೆ. ಆದರೆ, ಬಳ್ಳಾರಿಗರಿಗೆ ಬೇಕಾಗಿರುವುದು ಪ್ರತ್ಯೇಕವಾಗಿ ಒಣ ಮೆಣಸಿನಕಾಯಿ ಮಾರುಕಟ್ಟೆ. ಕಾರಣ ಪ್ರತಿಭಟನೆ ನಡೆಸಲಾಗುತ್ತಿದೆ ಎಂದರು.

ಬಳ್ಳಾರಿಯಲ್ಲಿ 50ರಿಂದ 60 ಕೋಲ್ಡ್ ಸ್ಟೋರೇಜ್‌ಗಳಿವೆ. ಇನ್ನೂ ಹೆಚ್ಚಿನ ಕೋಲ್ಡ್ ಸ್ಟೋರೇಜ್‌ಗಳು ನಿರ್ಮಾಣವಾಗುತ್ತಿವೆ. ಬಳ್ಳಾರಿ ಮತ್ತು ಸುತ್ತಲಿನ ರೈತರು ಒಣ ಮೆಣಸಿನಕಾಯಿಯನ್ನು ಮಾರಾಟ ಮಾಡಲು 400 ಕಿಮೀ ದೂರದ ಬ್ಯಾಡಗಿ ಮತ್ತು ಆಂಧ್ರಪ್ರದೇಶದ ಗುಂಟೂರು ಮಾರುಕಟ್ಟೆಯನ್ನು ಅವಲಂಭಿಸಿದ್ದಾರೆ. ಸಣ್ಣ ಮತ್ತು ಅತಿ ಸಣ್ಣ ರೈತರು ಮಧ್ಯಮರ್ತಿಗಳಿಗೆ ಮಾರಾಟ ಮಾಡುತ್ತಿದ್ದಾರೆ. ಒಣ ಮೆಣಸಿನಕಾಯಿ ಬೆಳೆಗಾರರನ್ನು ಸಂರಕ್ಷಣೆ ಮಾಡಲಿಕ್ಕಾಗಿಯೇ ಸರ್ಕಾರ ಬಳ್ಳಾರಿಯಲ್ಲಿ ತಕ್ಷಣವೇ ಪ್ರತ್ಯೇಕವಾಗಿ ಒಣ ಮೆಣಸಿನಕಾಯಿ ಮಾರುಕಟ್ಟೆಯನ್ನು ನಿರ್ಮಾಣ ಮಾಡಬೇಕು ಎಂದರು. ಬಳ್ಳಾರಿಯಲ್ಲಿ ಅತ್ಯಾಧುನಿಕ ಒಣ ಮೆಣಸಿನಕಾಯಿ ಮಾರುಕಟ್ಟೆ ನಿರ್ಮಾಣ ಆದಲ್ಲಿ ಬಳ್ಳಾರಿ, ರಾಯಚೂರು, ಯಾದಗಿರಿ, ಕೊಪ್ಪಳ, ವಿಜಯನಗರ ಮತ್ತು ದಾವಣಗೆರೆ ಜಿಲ್ಲೆಯ ರೈತರು ಸುಲಭವಾಗಿ ಮತ್ತು ತ್ವರಿತವಾಗಿ ಬಳ್ಳಾರಿಯನ್ನು ತಲುಪಿ, ಬೆಳೆಯನ್ನು ಮಾರಾಟ ಮಾಡಲು ಅನುಕೂಲವಾಗಲಿದೆ. ರಸ್ತೆಯಲ್ಲಿ ನಡೆಯುವ ಅನೇಕ ಅವಘಡಗಳನ್ನು ತಪ್ಪಿಸಲೂ ಸಾಧ್ಯವಾಗುತ್ತದೆ. ಈ ಮೂಲಕ ಸ್ಥಳೀಯ ಅಭಿವೃದ್ಧಿ, ರೈತರ ಹಿತರಕ್ಷಣೆ ಮತ್ತು ವ್ಯಾಪಾರಿಗಳಿಗೆ ಸಾಕಷ್ಟು ಅನುಕೂಲವಾಗಲಿದೆ ಎಂದರು. ಪ್ರತಿಭಟನೆಯು ಬೆಳಗ್ಗೆ 8 ಗಂಟೆಗೆ ನಗರದ ಎಪಿಎಂಸಿಯಲ್ಲಿ ಪ್ರಾರಂಭವಾಗಿತ್ತು. ಎಪಿಎಂಸಿಯಲ್ಲಿಯ ಎಲ್ಲಾ ವ್ಯಾಪಾರಿಗಳು ಅಂಗಡಿಗಳನ್ನು ಮುಚ್ಚಿ ಪ್ರತಿಭಟನೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಪ್ರತಿಭಟನೆಯು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯನ್ನು ತಲುಪಿ, ಗಡಿಗೆ ಚೆನ್ನಪ್ಪ ವೃತ್ತದಲ್ಲಿ ಸಭೆ ಸೇರಿತು. ಗಡಿಗೆ ಚೆನ್ನಪ್ಪ ವೃತ್ತದಿಂದ ಜಿಲ್ಲಾಡಳಿತಕ್ಕೆ ಕಾಲ್ನಡಿಗೆಯಲ್ಲಿ ಹೊರಟ ಪ್ರತಿಭಟನೆಯು ಜಿಲ್ಲಾಡಳಿತದ ಮೂಲಕ ಮನವಿ ಮುಖ್ಯಮಂತ್ರಿಗೆ ಸಲ್ಲಿಸಲಾಯಿತು. ಜಿಲ್ಲಾ ಹೆಚ್ಚುವರಿ ಜಿಲ್ಲಾಧಿಕಾರಿ ಮೊಹಮ್ಮದ್ ಜುಬೇರ್ ಅವರು, ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿ, ಸರ್ಕಾರಕ್ಕೆ ಮನವಿ ತಲುಪಿಸುವುದಾಗಿ ಹೇಳಿದರು.

ಪ್ರತಿಭಟನೆಯಲ್ಲಿ 500 ಕ್ಕೂ ಹೆಚ್ಚು ಪ್ರತಿಭಟನಾಕಾರರು ಪಾಲ್ಗೊಂಡಿದ್ದರು. ಅಲ್ಲದೇ, ದಲ್ಲಾಲಿ ವರ್ತಕರ ಸಂಘ, ಕನ್ನಡ ನಾಡು ರೈತ ಸಂಘ, ಜಿಎನ್ ಅಂಡ್ ಎಸ್ ಎಫ್ ಟ್ರೇಡರ್ಸ್ ಅಸೋಸಿಯೇಷನ್, ಬಳ್ಳಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಟ್ರೇಡರ್ಸ್ ಅಸೋಸಿಯೇಷನ್, ಬಳ್ಳಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಹಮಾಲರ ಸಂಘ, ಹಾಗೂ ವಿವಿಧ ಸಂಘಗಳು ಪಾಲ್ಗೊಂಡಿದ್ದವು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಗೌರವ ಕಾರ್ಯದರ್ಶಿ ಕೆ.ಸಿ. ಸುರೇಶಬಾಬು, ಮಾಜಿ ಅಧ್ಯಕ್ಷರಾದ ಬಿ. ಮಹಾರುದ್ರಗೌಡ, ಸಿ.ಶ್ರೀನಿವಾಸರಾವ್, ಹಿರಿಯ ಉಪಾಧ್ಯಕ್ಷರಾದ ಅವ್ವಾರು ಮಂಜುನಾಥ್, ಉಪಾಧ್ಯಕ್ಷರುಗಳಾದ ಎಸ್. ದೊಡ್ಡನಗೌಡ, ಸೊಂತಾ ಗಿರಿಧರ, ಜಂಟಿ ಕಾರ್ಯದರ್ಶಿಗಳಾದ ಡಾ. ಮರ್ಚೇಡ್ ಮಲ್ಲಿಕಾರ್ಜುನಗೌಡ, ವಿ. ರಾಮಚಂದ್ರ, ಖಜಾಂಚಿ ಪಿ. ಪಾಲಣ್ಣ, ಎಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

# ಅರಣ್ಯ ಹಕ್ಕು ಅರ್ಜಿಗಳ ಪುನರ್ ಪರಿಶೀಲನೆ ಮಾಡುವಂತೆ ಪ್ರಾಂತ ರೈತ ಸಂಘ ಒತ್ತಾಯ




ಬಳ್ಳಾರಿ: ಸಾಗುವಳಿ ಮಾಡುವ ರೈತರಿಗೆ ಪಟ್ಟ ನೀಡಬೇಕೆಂದು ಅರ್ಜಿ ಸಲ್ಲಿಸಿದ ಮೊದಲ ಹಂತದಲ್ಲಿ 3128 ಅರ್ಜಿಗಳನ್ನು ಗ್ರಾಮ ಮಟ್ಟದಿಂದ ಉಪ ವಿಭಾಗ ಮಟ್ಟದಲ್ಲಿ ದಾಖಲೆ ಇರುವವರನ್ನು ಪರಿಶೀಲಿಸಿ ಪಟ್ಟಾ ನೀಡಲು ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಪದಾಧಿಕಾರಿಗಳು ಸರ್ಕಾರವನ್ನು ಒತ್ತಾಯಿಸಿದರು.

ಅವರಿಂದು ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ಅರಣ್ಯ ಹಕ್ಕು ಸಮಿತಿಯು ವಾರಕ್ಕೆ ಒಂದು ಅರಣ್ಯ ಹಕ್ಕು ಸಮಿತಿ ಸಭೆ ಮಾಡಲಾಗುವುದು. ಮುಂದಿನ 2 ತಿಂಗಳಲ್ಲಿ ಪಂಚಾಯಿತಿ ವಾರು ಹಂತ ಹಂತದಲ್ಲಿ ಅರ್ಜಿಗಳನ್ನು ಪುನರ್ ಪರಿಶೀಲಿಸಿ ಸಮಸ್ಯೆಯನ್ನು ಪರಿಹರಿಸಿ ನ್ಯಾಯ ದೊರಕಿಸಿಕೊಡುವುದಾಗಿಯೂ ಹಾಗೂ ಮಾಹಿತಿ ಕೊರತೆಯಿಂದಾಗಿ ಅರ್ಜಿ ಗೆ ದಾಖಲಾತಿಗಳನ್ನು ನೀಡದ ರೈತರಿಗೆ ಮತ್ತೊಮ್ಮೆ ಅವಕಾಶ ನೀಡಲು ಒಪ್ಪಿಗೆ ನೀಡಿದರೂ ರೈತರಿಗೆ ಒಕ್ಕಲೆಬ್ಬಿಸುವ ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಜಿಲ್ಲಾಧಿಕಾರಿರವರಿಗೆ ಮತ್ತು ತಮ್ಮ ಗಮನಕ್ಕೆ ತರಲು ರೈತರಿಗೆ ಹೇಳಲಾಗಿದೆ.ಪ್ರಮುಖ ಬೇಡಿಕೆ ಈಡೇರಿಸುವುದಾಗಿ ಭರವಸೆ ನೀಡಿದ ಬಳಿಕ ಪ್ರತಿಭಟನಾ ಧರಣಿಯನ್ನು ಹಿಂಪಡೆಯಲಾಯಿತು. ಅರಣ್ಯ ಹಕ್ಕು ಸಮಿತಿಯಲ್ಲಿ ಬಾಕಿ ಇರುವ ಅರ್ಜಿಗಳನ್ನು ಪುನ ಪರಿಶೀಲನೆಗೆ ಸಂಡೂರು ತಾಲೂಕಿನ ಎಲ್ಲಾ ಗ್ರಾಮದ ರೈತರ ಅರ್ಜಿಗಳನ್ನು ಪರಿಗಣಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಾದನಹಟ್ಟಿ ಶಿವಶಂಕರ್, ಕಲಂದರ್, ದುರ್ಗಮ್ಮ ಸೇರಿದಂತೆ ಇನ್ನಿತರ ಇದ್ದರು.

# ಬಡ ಕುಟುಂಬಗಳಿಗೆ ಧರ್ಮಸ್ಥಳ ಸಂಸ್ಥೆಯಿಂದ 'ವಾತ್ಸಲ್ಯ ಮನೆ' ನಿರ್ಮಾಣ



ಕೂಡ್ಲಿಗಿ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ನಿರ್ಗತಿಕರಿಗೆ ಮಾಸಾಶನ ನೀಡುವುದು ಸೇರಿದಂತೆ ಆರ್ಥಿಕವಾಗಿ ಹಿಂದುಳಿದ ಬಡ ಕುಟುಂಬಗಳಿಗೆ ಮನೆ ನಿರ್ಮಿಸಿಕೊಡಲಾಗುತ್ತಿದೆ' ಎಂದು ಸಂಸ್ಥೆಯ ವಿಜಯನಗರ ಜಿಲ್ಲಾ ನಿರ್ದೇಶಕ ಸತೀಶ್ ಶೆಟ್ಟಿ ಹೇಳಿದರು.

ಸಂಸ್ಥೆಯ ವಾತ್ಸಲ್ಯ ಯೋಜನೆಯಡಿ ಕೂಡ್ಲಿಗಿ ತಾಲೂಕಿನ ತಾಯಕನಹಳ್ಳಿ ವಲಯ ಜುಮ್ಮೋಬನಹಳ್ಳಿ ಮ್ಯಾಸರಹಟ್ಟಿ ಕಾರ್ಯಕ್ಷೇತ್ರದ ಗುರುಮೂರ್ತಿ ಕುಟುಂಬಕ್ಕೆ ಮಂಜೂರಾದ ಮನೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು 'ರಾಜ್ಯದಲ್ಲಿ ಸಮುದಾಯ ಅಭಿವೃದ್ಧಿ ಯೋಜನೆಯಡಿ ಅಂದಾಜು ಸಾವಿರಾರು ಫಲಾನುಭವಿಗಳಿಗೆ ಪ್ರತಿ ತಿಂಗಳು 750 ರಿಂದ 1 ಸಾವಿರದ ವರೆಗೆ ಸಂಸ್ಥೆ ಮಾಸಾಶನ ನೀಡುತ್ತಿದೆ ಎಂದರು. ಕೂಡ್ಲಿಗಿ ತಾಲ್ಲೂಕಿನಲ್ಲಿ 24 ಜನರಿಗೆ ಮಾಸಾಶನ ನೀಡಲಾಗುತ್ತಿದೆ,. ವಾತ್ಸಲ್ಯ ಯೋಜನೆಯಡಿ ತಾಲೂಕಿನಲ್ಲಿ ಈಗಾಗಲೇ ಎರಡು ಕುಟುಂಬಗಳಿಗೆ 1 ಲಕ್ಷ ವೆಚ್ಚದಲ್ಲಿ ಮನೆ ನಿರ್ಮಿಸಿಕೊಡಲಾಗುತ್ತಿದೆ. ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಸರ್ವಾಂಗೀಣ ಅಭಿವೃದ್ದಿಗೆ ಸ್ವಸಹಾಯ ಗುಂಪುಗಳ ಮೂಲಕ ಸಂಸ್ಥೆ ಶ್ರಮಿಸುತ್ತಿದೆ' ಎಂದರು. ಗ್ರಾಮ ಪಂಚಾಯಿತಿ ಸದಸ್ಯ ಬಸಣ್ಣ ಮಾತನಾಡಿದರು. ಈ ಸಂದರ್ಭದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜ್ಞಾನ ವಿಕಾಸ ಕೇಂದ್ರದ ತಾಲೂಕು ಸಮನ್ವಯಾಧಿಕಾರಿ ರೇಖಾ ನೀರಲಕೇರಿ,ತಾಯಕನಹಳ್ಳಿ ವಲಯ ಮೇಲ್ವಿಚಾರಕರಾದ ಪ್ರಕಾಶ್, ಗ್ರಾಮ ಪಂಚಾಯಿತಿ ಸದಸ್ಯ ಪೂಜಾರಿ ಪಾಲಣ್ಣ, ಮುಖಂಡರಾದ ಮಂಜಣ್ಣ, ಮಹಮ್ಮದ್, ಬೋರಣ್ಣ, ಸೇವಾ ಪ್ರತಿನಿಧಿ ರವಿ, ನಾಗಭೂಷಣ, ತಿಪ್ಪಣ್ಣ,ವಿಎಲ್ಇ ಗೋವಿಂದರಾಜು ಸೇರಿದಂತೆ ಸ್ವಸಹಾಯ ಸಂಘಗಳ ಸದಸ್ಯರು, ಊರಿನ ಮುಖಂಡರು ಉಪಸ್ಥಿತರಿದ್ದರು.

# ಮಾರುಕಟ್ಟೆಯಲ್ಲಿ ಗ್ರಾಹಕನೇ ಸಾರ್ವಭೌಮ

## ಪ್ರಧಾನ ಸಿವಿಲ್ ನ್ಯಾಯಾಧೀಶ ಪ್ರಶಾಂತ್ ನಾಗಲಾಪುರ್ ಅಭಿಮತ

ಉದಯಕಾಲ ನ್ಯೂಸ್

**ವಿಜಯನಗರ (ಹೊಸಪೇಟೆ):** ಸಾಂಘಿಕ ಸಮುದಾಯದಲ್ಲಿ ವಾಸಿಸುತ್ತಿರುವ ಪ್ರತಿಯೊಬ್ಬರು ಗ್ರಾಹಕರೇ, ತಮ್ಮ ಗ್ರಾಹಕ ಹಕ್ಕುಗಳನ್ನು ಅರಿತು ಕಾಯಿದೆಯ ಸದುಯೋಗಪಡಿಸಿಕೊಂಡರೇ ಮಾರುಕಟ್ಟೆಯಲ್ಲಿ ಗ್ರಾಹಕನೇ ಸಾರ್ವಭೌಮನಾಗುತ್ತಾನೆ ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಪ್ರಶಾಂತ್ ನಾಗಲಾಪುರ್ ಹೇಳಿದರು.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಸೇರಿ ವಿವಿಧ ಇಲಾಖೆಗಳ ಸಹಯೋಗದಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಗ್ರಾಹಕರು ತಾವು ಖರೀದಿಸುವ ಸರಕು ಅಥವಾ ಸೇವೆಗಳಲ್ಲಿ ಯಾವುದೇ ರೀತಿಯ ಲೋಪದ ಸರಕುಗಳು, ಸಮಧಾನಕರವಲ್ಲದ ವ್ಯಾಪಾರ ಪದ್ಧತಿಗಳು ಕಂಡುಬಂದರೆ ಅದರ ವಿರುದ್ಧ ಸುರಕ್ಷೆ ಪಡೆಯಲು ಕಾನೂನಿನಲ್ಲಿ ಅವಕಾಶವಿದೆ. ಈ ದಿನ ಗ್ರಾಹಕರಿಗೆ ಗ್ರಾಹಕ ಹಕ್ಕುಗಳ ಮಹತ್ವವನ್ನು ಮನವರಿಕೆ ಮಾಡಿಕೊಡಲು ಹಾಗೂ ಇತರರಿಗೆ ಈ ಬಗ್ಗೆ ಜಾಗೃತಿ ಮೂಡಿಸಲು ಅವಕಾಶ ನೀಡಲಾಗಿದೆ. ಗ್ರಾಹಕ ಚಳವಳಿಗಳ ಮಹತ್ವ ಹಾಗೂ ಗ್ರಾಹಕರಿಗೆ ತಮ್ಮ ಹಕ್ಕು ಕರ್ತವ್ಯಗಳ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಅನುಕೂಲವಾಗಲಿದೆ.

ಭಾರತದಲ್ಲಿ 1986 ರ ಡಿಸೆಂಬರ್ 24 ರಂದು ಗ್ರಾಹಕ ಸಂರಕ್ಷಣಾ ಕಾಯಿದೆಗೆ ಸಂಸತ್ತಿನಲ್ಲಿ ಅಂಗೀಕಾರ




ದೊರೆತು. ರಾಷ್ಟ್ರಪತಿಗಳ ಅಂಕಿತ ದೊರಕಿತ್ತು. ಈ ಕಾಯಿದೆಯನ್ನು ಅನುಷ್ಠಾನಗೊಳಿಸಿದ್ದನ್ನು ದೇಶದ ಗ್ರಾಹಕ ಚಳವಳಿಯಲ್ಲಿ ಐತಿಹಾಸಿಕ ಮೈಲಿಗಲ್ಲು ಸಾಧಿಸಿದೆ ಎಂದು ಭಾವಿಸಬಹುದಾಗಿದೆ.

ಉತ್ಪಾದಕರು ಮತ್ತು ಮಾರಾಟಗಾರರಿಂದ ಆಗುವ ಗ್ರಾಹಕ ಶೋಷಣೆಗಳಿಂದ ಸೂಕ್ತ ರಕ್ಷಣೆ ಒದಗಿಸುವ ಸದುದ್ದೇಶದಿಂದ ಕಾಯಿದೆ ಜಾರಿಗೆ ತರಲಾಗಿದೆ. ಸಾಂಘಿಕ ಸಮುದಾಯದಲ್ಲಿರುವ ಪ್ರತಿಯೊಬ್ಬರು ಗ್ರಾಹಕರೇ ಆಗಿರುವುದರಿಂದ ಸಂರಕ್ಷಣಾ ಕಾಯಿದೆ ಬಗ್ಗೆ ಅರಿವು ಪಡೆದುಕೊಂಡು ಕಾಯಿದೆಯ ಸದುಪಯೋಗಪಡೆದುಕೊಳ್ಳಬೇಕಿದೆ ಎಂದರು.

ಈ ವೇಳೆ ಸಿವಿಲ್ ನ್ಯಾಯಾಧೀಶೆ ಜೆ.ಚೈತ್ರ, ಜಿಲ್ಲಾ ಕಾರ್ಮಿಕ ಅಧಿಕಾರಿ ಸೂರಪ್ಪ ಡೊಂಬರ ಮತ್ತೂರು, ತಹಸೀಲ್ದಾರ ಶೃತಿ ಎಂ ಮಳ್ಳಪ್ಪಗೌಡ, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಶ್ರೀನಿವಾಸ ಮೂರ್ತಿ, ಶಿಶು ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಯೋಜನಾಧಿಕಾರಿ ಸಿಂಧು ಅಂಗಡಿ, ಅಹಾರ ಶಿರಸ್ತೇದಾರ ಜಿ.ಎಚ್.ರುದ್ರಪ್ಪ, ಕಾರ್ಮಿಕ ನಿರೀಕ್ಷಕರಾದ ಶಿವಶಂಕರ.ಬಿ.ತಳವಾರ, ಗೋಪಾಲ್ .ಬಿ.ಧೂಪದ, ಕಿರಾಣಿ ವರ್ತಕರ ಸಂಘದ ಅಧ್ಯಕ್ಷ ಮುಗದ ನಾಗರಾಜ ಇತರರಿದ್ದರು. ವಕೀಲರಾದ ಕಲೀಸಾಹೇಬ್ ನಿರ್ವಹಿಸದರು.

# ಮರಿಯಮ್ಮನಹಳ್ಳಿ: ಸಹಕಾರಿ ಸಂಘದ 12 ಸ್ಥಾನಕ್ಕೆ ಅವಿರೋಧ ಆಯ್ಕೆ

ಉದಯಕಾಲ ನ್ಯೂಸ್

**ಮರಿಯಮ್ಮನಹಳ್ಳಿ:** ಸಮೀಪದ ಚಿಲಕನಹಟ್ಟಿಯ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ 12 ಸ್ಥಾನಗಳಿಗೆ ಘೋಷಣೆಯಾದ ಚುನಾವಣೆಯಲ್ಲಿ ಎಲ್ಲಾ ಸ್ಥಾನಗಳು ಅವಿರೋಧವಾಗಿ ಆಯ್ಕೆಯಾಗಿವೆ.

ಬಿಜೆಪಿ, ಜೆಡಿಎಸ್ ಹಾಗು ಕಾಂಗ್ರೆಸ್ ಪಕ್ಷಗಳು ಒಮ್ಮತದಿಂದ ಎಲ್ಲಾ ಸ್ಥಾನಗಳಿಗೆ ಅವಿರೋಧವಾಗಿ ಆಯ್ಕೆ ಮಾಡಿವೆ. ಸಾಲಗಾರರ ಕ್ಷೇತ್ರದ 11 ಸ್ಥಾನಗಳಿಗೆ 58 ನಾಮಪತ್ರ ಸಲ್ಲಿಕೆಯಾಗಿದ್ದವು, ಸಾಲೇತರ ಕ್ಷೇತ್ರದ 1 ಸ್ಥಾನಕ್ಕೆ 7 ನಾಮಪತ್ರಗಳು ಸಲ್ಲಿಕೆಯಾಗಿ ಒಟ್ಟು 65 ನಾಮಪತ್ರ ಸಲ್ಲಿಕೆಯಾಗಿದ್ದವು.

53 ನಾಮಪತ್ರಗಳು ಹಿಂಪಡೆದುದರಿಂದ, ಉಳಿದವರು ಅವಿರೋಧವಾಗಿ ಆಯ್ಕೆಯಾದರು.

ಈ ಸಂಧರ್ಭದಲ್ಲಿ ಚುನಾವಣಾಧಿಕಾರಿ ಮಾರಗದಪ್ಪ,



ಸಹ ಚುನಾವಣಾಧಿಕಾರಿ ಎಂ. ಮಲ್ಲಿಕಾರ್ಜುನಶೆಟ್ಟಿ, ಸಹಕಾರ ಸಂಘದ ಕಾರ್ಯದರ್ಶಿ ಎ. ವೆಂಕಟೇಶ, ಸ್ಥಳಿಯ ಮುಖಂಡರು ಹಾಜರಿದ್ದರು.

ಆಯ್ಕೆ: ಸಾಲಗಾರರ ಸಾಮಾನ್ಯ ಕ್ಷೇತ್ರದಿಂದ ಎಚ್.ಎಂ. ಕೊಟ್ರಯ್ಯ ಬ್ಯಾಲಕುಂದಿ, ಎಂ. ತಮ್ಮಣ್ಣ ಹಾರುವನಹಳ್ಳಿ, ಎಂ. ನಬಿಸಾಬ್ ಗರಗ, ವೆಂಕಟೇಶ ಗರಗ, ಜಿ. ವೆಂಕಟೇಶ ಬ್ಯಾಲಕುಂದಿ, ಗೋವಿಂದನಾಯ್ಕ್ (ಪ.ಜಾ.ಮೀಸಲು)ತಾಳೆಬಸಾಪುರತಾಂಡ,ಬಂಗಾರಜ್ಜ(ಪ.ಪಂ.)ಚಿಲಕನಹಟ್ಟಿ,ಶಾರದಮ್ಮ ತಿಮ್ಮಲಾಪುರ(ಮಹಿಳಾಮೀಸಲು),ನಾಗಲಾಪುರ ಕೆ.ಹನುಮಂತಮ್ಮ(ಮಹಿಳಾಮೀಸಲು),ಪಿ.ಎಂ.ಬಸವರಾಜ ಪೋತಲಕಟ್ಟೆ(ಒ.ಬಿ.ಸಿ.(ಎ),ನಾಗಲಾಪುರದ ವಿ.ಹರಿಶಂಕ್ರಪ್ಪ(ಒ.ಬಿ.ಸಿ.(ಎ),ಸಾಲೇತರ ಕ್ಷೇತ್ರದಸಾಮಾನ್ಯ ಸ್ಥಾನದ ಕೋಳಿಬಸವರಾಜ ಚಿಲಕನಹಟ್ಟಿ ಇವರು ಅವಿರೋಧವಾಗಿ ಆಯ್ಕೆಯಾದರು.

# ಕೇಂದ್ರ ಸಚಿವ ಅಮಿತ್ ಷಾ ವಜಾಕ್ಕೆ ದಸಂಸ ಒತ್ತಾಯ



ಉದಯಕಾಲ ನ್ಯೂಸ್

**ಕೊಟ್ಟೂರು:** ಕೇಂದ್ರ ಗೃಹ ಸಚಿವ ಅಮಿತ್ ಷಾ. ಸಮಾಜದಲ್ಲಿ ಸೌಹಾರ್ದತೆ ಭಂಗ ತರುವ ಮಾನಸಿಕ ಅಸ್ವಸ್ಥ ಅವರ ಹೇಳಿಕೆ ಅವರ ವ್ಯಕ್ತಿತ್ವವನ್ನು ಸೂಚಿಸುತ್ತದೆ ಎಂದು ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಬದ್ದಿ ಮರಿಸ್ವಾಮಿ ಹೇಳಿದರು.

ಕೊಟ್ಟೂರಿನಲ್ಲಿ ಮಂಗಳವಾರ ಸಾಮೂಹಿಕ ಸಂಘಟನೆಗಳ ಒಕ್ಕೂಟ ಕೇಂದ್ರ ಸಚಿವ ಅಮಿತ್ ವಿರುದ್ದ ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದರು.

ಅಂಬೇಡ್ಕರ್ ಫ್ಯಾಶನ್ ಅಲ್ಲ ಅಂಬೇಡ್ಕರ್ ಎಂದರೆ ಜ್ಞಾನ, ನ್ಯಾಯ, ಸಮಾನತೆ, ನ್ಯಾಯ ನೀಡುವ ನಿಜವಾದ ದೇವರು ಇಂತಹ ಮಹಾನ್ ನಾಯಕ ಬಗ್ಗೆ ಲಘುವಾಗಿ ಅಮಿತ್ ಶಾ ರವರು ಮಾತನಾಡಿರುವುದು ಖಂಡನಿಯ ಕೂಡಲೇ ರಾಜೀನಾಮೆ ನೀಡಬೇಕೆಂದು ಅಗ್ರಹಿಸಿದರು.

ಡಿಎಸ್ ಎಸ್ ಮುಖಂಡ ತೆಗ್ಗಿನಕೇರಿ ಕೊಟ್ರೇಶ ರವರು ಮಾತನಾಡಿ ಅಂಬೇಡ್ಕರ್ ಅವರನ್ನು ಅವಮಾನಿಸುವ ಮೂಲಕ ಅಮಿತ್ ಷಾ ಇಡೀ ಶೋಷಿತ ಸಮಾಜಕ್ಕೆ ಅವಮಾನ ಮಾಡಿದ್ದಾರೆ. ದೇಶದ ಶೋಷಿತರು ಎಂದೂ ಕ್ಷಮಿಸಬಾರದು ಎಂದು ಕರೆ ನೀಡಿದರು.

ಕೊಟ್ಟೂರು ತಾಲೂಕು ಅಂಬೇಡ್ಕರ್ ಸಂಘದ ಅಧ್ಯಕ್ಷ ಬದ್ದಿ.ದುರುಗೇಶ. ಮಾತನಾಡಿ ಅಂಬೇಡ್ಕರ್ ರಚಿಸಿದ ಸಂವಿಧಾನದಿಂದಾಗಿ ಇಡೀ ದೇಶ ಸೌಹಾರ್ದ ಯುತವಾಗಿ ಬಾಳುತ್ತಿದ್ದರೆ. ಇದನ್ನು ಕದಲಾಡಿಸುವ ಕೆಲಸ ಅಮಿತ್ ಷಾ ರವರು ಮಾಡುತ್ತಿದ್ದಾರೆ ಎಂದು ಹೇಳಿದರು

ವಕೀಲ ಹನುಮಂತಪ್ಪ. ಶೋಷಿತ ಸಮಾಜವು ಸರ್ವಕ್ಷೇತ್ರದಲ್ಲಿ ಪ್ರಗತಿ ಹೊಂದುತ್ತಿರುವುದನ್ನು ಸಹಿಸದ ಅಮಿತ್ ಷಾ ಕೇಂದ್ರ ಗೃಹಸಚಿವರಾಗಲು ಅರ್ಹತೆ ಇಲ್ಲ, ಇವರನ್ನು ಕೊಡಲೆ ಸಚಿವ ಸ್ಥಾನದಿಂದ ವಜಾಗೊಳಿಸಬೇಕೆಂದರು.

ವಕೀಲ ಅಜ್ಜಪ್ಪ ಮಾತನಾಡಿದರು. ನೂರಾರು ಸಂಖ್ಯೆಯಲ್ಲಿದ್ದ ಪ್ರತಿಭಟನಾಕರರು ಪಟ್ಟಣದ ಗಾಂಧಿ ಸರ್ಕಲ್ ನಿಂದ ಉಜ್ಜಿನಿ ಸರ್ಕಲ್ ದಾಟಿ ರೇಣುಕಾ ಟಾಕೀಸ್ ಮಾರ್ಗವಾಗಿ ಬಸ್ ನಿಲ್ದಾಣಕ್ಕೆ ಆಗಮಿಸಿ ಮಾನವ ಸರಪಳಿ ರಚಿಸಿದರು. ಕಂದಗಲ್ಲು ಪರುಶುರಾಮ್. ಕೆಂಗರಾಜ್. ತಸ್ಲಿಮ್ ಬಾನು.ಡಿಎಸ್ ಎಸ್.ತಾಲೂಕು ಅಧ್ಯಕ್ಷ .ಪಿ. ಚಂದ್ರಶೇಖರ್.ರೈತ ಸಂಘದ ತಾಲೂಕು ಪ್ರಧಾನ ಕಾರ್ಯದರ್ಶಿ. ಗುಡಿಯರ ಮಲ್ಲಿಕಾರ್ಜುನ್, ರೈತ ಮುಖಂಡ ಭರಮಪ್ಪ, ಎಸ್ ಮೈಲಪ್ಪ, ಎಚ್. ಕೊಲ್ಲಾರಪ್ಪ ಪಿ.ಮಹೇಶ. ಬಣಕಾರ್. ಶಿವರಾಜ್. ಬಾಂಡ್ ರವಿ .ಬಿ..ಪರಶುರಾಮ್, ಕೊಟ್ರೇಶ್, ರೋಹಿತ್, ಮುಂತಾದವರಿದ್ದರು. ಗ್ರೇಡ್ 2 ತಹಶಿಲ್ದಾರ ಪ್ರತಿಭ ಮನವಿ ಪತ್ರ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಅರ್ಧಗಂಟೆಗೂ ಹೆಚ್ಚುಕಾಲ ಟ್ರಾಫಿಕ್ ಜಾಮ್ ಆಗಿತ್ತು. ಪ್ರತಿಭಟನೆ ವೇಳೆ ಅಮಿತ್ ಷಾ ವಿರುದ್ಧ ಘೋಷಣೆ ಕೂಗಲಾಯಿತ್ತು.

# ಪ್ರತಿಯೊಬ್ಬರಿಗೂ ಗ್ರಾಹಕರ ರಕ್ಷಣೆ ಕಾಯ್ದೆಯ ಅರಿವು ಅಗತ್ಯ

## ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಕಾರ್ಯಕ್ರಮದಲ್ಲಿ ನ್ಯಾ.ವಿದ್ಯಾಧರ ಶಿರಹಟ್ಟಿ ಅಭಿಮತ

ಉದಯಕಾಲ ನ್ಯೂಸ್

**ಬಳ್ಳಾರಿ:** ಹಣ ನೀಡಿ ಸೇವೆ ಸ್ವೀಕರಿಸುವ ಪ್ರತಿಯೊಬ್ಬರೂ ಗ್ರಾಹಕರಾಗಿದ್ದು, ಸೇವೆಯಲ್ಲಿ ಲೋಪವಾದಾಗ ಗ್ರಾಹಕರ ರಕ್ಷಣೆ ಕಾಯ್ದೆ-1986ರ ಕುರಿತು ಅರಿವು ಹೊಂದುವುದು ಅಗತ್ಯವಾಗಿದೆ ಎಂದು ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಒಂದನೇ ಹೆಚ್ಚುವರಿ ನ್ಯಾಯಧೀಶರಾದ ವಿದ್ಯಾಧರ ಶಿರಹಟ್ಟಿ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಆಹಾರ ಸುರಕ್ಷತಾ ಇಲಾಖೆ ಹಾಗೂ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಇವರ ಸಂಯುಕ್ತಾಶ್ರಯದಲ್ಲಿ ನಗರದ ಅಲ್ಲಿಪುರ ರಸ್ತೆಯ ವಿವಿಯ ಡಾ.ಬಿ.ಆರ್.ಅಂಬೇಡ್ಕರ್ ಸಭಾ ಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಹಕರು ವಸ್ತು-ಸಾಮಾಗ್ರಿ ಖರೀದಿಸುವ ಸಂಧರ್ಭದಲ್ಲಿ ಉತ್ಕೃಷ್ಟ ಹಾಗೂ ಉತ್ತಮ ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಸೇವಾ ವಲಯ ಮತ್ತು ವಾಣಿಜ್ಯ ವಲಯ ಸೇರಿದಂತೆ ಇತರೆ ವಲಯಗಲ್ಲಿ ಗ್ರಾಹಕರು ನ್ಯೂನತೆ ಎದುರಿಸಿದಲ್ಲಿ ಕಾನೂನಾತ್ಮಕ ರಕ್ಷಣೆಗೆ ಮುಂದಾಗಬೇಕು



ಎಂದು ತಿಳಿಸಿದರು.

ಪ್ರಸ್ತುತ ಡಿಜಿಟಲ್ ಮಾಧ್ಯಮದ ಯುಗವಾಗಿದೆ. ಗ್ರಾಹಕರು ತಮ್ಮ ಅಂಗೈಯಲ್ಲಿನ ಮೊಬೈಲ್ ಬಳಕೆಯಿಂದ ಅಗತ್ಯ ವಸ್ತುಗಳ ಖರೀದಿಗೆ ಮುಂದಾಗುತ್ತಾರೆ. ಆನ್‌ಲೈನ್ ವಹಿವಾಟಿನಲ್ಲಿ ಮೋಸ ಹೋಗುವ ಸಂಭವವಿದ್ದು, ಕಾನೂನು ತಿಳುವಳಿಕೆ ಇರಬೇಕು ಎಂದು ವಿದ್ಯಾರ್ಥಿ-ಗ್ರಾಹಕರಿಗೆ ಸಲಹೆ ನೀಡಿದರು.

ವಿವಿ ಕುಲಪತಿ ಪ್ರೊ.ಎಂ. ಮುನಿರಾಜು ಅಧ್ಯಕ್ಷತೆ ವಹಿಸಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ವಿದ್ಯಾವಂತ ಗ್ರಾಹಕರೇ ಹೆಚ್ಚು ವಂಚಿತರಾಗುತ್ತಿದ್ದು, ಅವರು ಎಚ್ಚೆತ್ತುಕೊಳ್ಳಬೇಕಿದೆ. ಅವಿದ್ಯಾವಂತರಿಗೆ ಮತ್ತು ತಮ್ಮ ನೆರೆ-ಹೊರೆಯರಿಗೆ ಗ್ರಾಹಕರ ರಕ್ಷಣೆಯ ಕಾನೂನು-ಕಾಯ್ದೆ ಕುರಿತು ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ತಿಪ್ಪೇಸ್ವಾಮಿ.ಎನ್ ಮಾತನಾಡಿ, ಹಣ ನೀಡಿ ಸೇವೆ ಪಡೆಯುವ ಎಲ್ಲರೂ ಗ್ರಾಹಕರೆ. ಗ್ರಾಹಕರು ಖರೀದಿಸುವ ವಸ್ತು ಅಥವಾ ಸಾಮಾಗ್ರಿಗಳಲ್ಲಿ ಲೋಪವಾದಲ್ಲಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ಭೇಟಿ ನೀಡಿ ಅರ್ಜಿ ಸಲ್ಲಿಸಿದರೇ, ಗ್ರಾಹಕರ ಸಮಸ್ಯೆಗಳನ್ನು ಗಣನೆಗೆ ತೆಗೆದುಕೊಂಡು ಪರಿಹಾರ ಒದಗಿಸಿ ಕೊಡಲಾಗುತ್ತದೆ ಎಂದು ಹೇಳಿದರು.

ಗ್ರಾಹಕರು ಕಾನೂನಿನಾತ್ಮಕ ಹಕ್ಕುಗಳಾದ ಗ್ರಾಹಕರ ರಕ್ಷಣಾ ಹಕ್ಕು, ಮಾಹಿತಿ ಪಡೆಯುವ ಹಕ್ಕು, ಆಯ್ಕೆಯ ಹಕ್ಕು, ಅದಾಲತ್ ಹಕ್ಕು, ಪರಿಹಾರ ಪಡೆಯುವ ಹಕ್ಕು, ಆರೋಗ್ಯ ಪೂರ್ಣ ಪರಿಸರ ಹಕ್ಕುಗಳ ಕುರಿತು ಜ್ಞಾನ ಹೊಂದಬೇಕು. ಯಾವುದೇ ವಸ್ತು-ಸಾಮಾಗ್ರಿ ಖರೀದಿಸಿದಾಗ ರಸೀದಿ ಪಡೆಯಬೇಕು ಎಂದು ತಿಳಿಸಿದರು. ಹಿರಿಯ ವಕೀಲ ಎನ್. ಪ್ರಕಾಶ್ ಕಾರ್ಯಕ್ರಮ ಕುರಿತು ವಿಶೇಷ ಉಪನ್ಯಾಸ ನೀಡಿದರು.

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಸಚಿವ ರುದ್ರೇಶ್, ಹಿರಿಯ ಸಿವಿಲ್ ನ್ಯಾಯಾಧೀಶ ಇಬ್ರಾಹಿಂ ಮುಜಾವರ್, ಕಾನೂನು ಮಾಪನ ಶಾಸ್ತ್ರದ ಸಹಾಯಕ ನಿಯಂತ್ರಕ ಅಮೃತಾ ಪಿ.ಚವ್ಹಾಣ, ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಉಪನಿರ್ದೇಶಕ ಸಕೀನ ಸೇರಿದಂತೆ ವಿದ್ಯಾರ್ಥಿಗಳು ಹಾಗೂ ಇತರರು ಉಪಸ್ಥಿತರಿದ್ದರು.

ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್

ನೋಂದಾಯಿತ ಕಚೇರಿ: ಗ್ರೇಪ್ ಗಾರ್ಡನ್, ನಂ. 27, 3ನೇ ಎ ಕ್ರಾಸ್, 18ನೇ ಮೈನ್ ಕೋರಮಂಗಲ 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560095
ಶಾಖಾ ಕಚೇರಿ: 48ಎ/6ಎ1, ಪಾಲ ಬಾದಾಮಿ ರಸ್ತೆ, ಗಂಗಾಪುರ್‌ಪೇಟೆ, ಗದಗ-ಬೆಟಗೇರಿ, ಕರ್ನಾಟಕ-582101

ಇ-ಹರಾಜು ಮಾರಾಟ ಸೂಚನೆ

ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆ್ಯಕ್ಟ್, 2002ನ್ನು ಓದಿಕೊಂಡಂತೆ ನಿಯಮ 8(6) ಮತ್ತು 9(1) ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ಅನ್ವಯ ಇ-ಹರಾಜು ಮಾರಾಟ ಪ್ರಕಟಣೆ

ಕೆಳಸಹಿದಾರರು ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಅಧಿಕೃತ ಅಧಿಕಾರಿಯಾಗಿದ್ದು, ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಸೆಕ್ಷನ್ 13(4)ರ ಸರ್ಫೇಸಿ ಕಾಯಿದೆ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸ್ವಾಧೀನಪಡಿಸಿಕೊಂಡಿರುತ್ತಾರೆ. ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು)ರಿಗೆ ತಿಳಿಸುವುದೇನೆಂದರೆ, ಈ ಕೆಳಗೆ ಪಟ್ಟಿ ಮಾಡಿರುವ ಸ್ಥಿರಾಸ್ತಿಗಳನ್ನು, ಬ್ಯಾಂಕ್ ಗೆ ಬರಬೇಕಾಗಿರುವ ಬಾಕಿ ಹಣದ ವಸೂಲಾತಿಗಾಗಿ "ಎಲ್ಲಿ ಹೇಗಿದೆಯೋ ಹಾಗೆ", "ಏನಿದೆಯೋ ಹಾಗೆ" ಮತ್ತು "ಏನಿದೆಯೋ ಹಾಗೆ" ಆಧಾರದ ಮೇಲೆ ಈ ಕೆಳಗೆ ಹೆಸರಿಸಿರುವ ದಿನಾಂಕ ಮತ್ತು ಸಮಯದಂದು ಮಾರಾಟ ಮಾಡಲಿರುವರು.

| ಸಾಲದ ಖಾತಾ ಸಂ. | ಸಾಲಗಾರರ ಹೆಸರು | (1) 13(2) ನೋಟೀಸ್ ದಿನಾಂಕ & ತಗಾದೆ ಮೊತ್ತ (2) ಸ್ವಾಧೀನತೆ ದಿನಾಂಕ | ಪ್ರಸಕ್ತ ಬಾಕಿ | ಮೀಸಲು ಬೆಲೆ | ಅರ್ನೆಸ್ಟ್ ಠೇವಣಿ ಹಣ (ಇಎಂಡಿ) |
|---|---|---|---|---|---|
| 1145210090000001 & 1145230040000001 & 1145218860000001 | ಮೆ॥ ಮೋಹನ್ ಕಿರಾಣಿ ಮತ್ತು ಜನರಲ್ ಸ್ಟೋರ್ಸ್ 2. ಶ್ರೀ ಸುರೇಂದ್ರ ಸಿಂಗ್ ಪ್ರಲ್ಹಾದಸಿಂಗ್ ದೊಡ್ಡಮಾನಿ 3. ಶ್ರೀಮತಿ ಪ್ರಿಯಾಂಕ ಎಸ್. ದೊಡ್ಡಮಾನಿ 4. ಶ್ರೀ ಶ್ರೀನಿವಾಸಸಿಂಗ್ ದೊಡ್ಡಮಾನಿ 5. ಶ್ರೀ ಪ್ರಲ್ಹಾದಸಿಂಗ್ ದೊಡ್ಡಮಾನಿ 6. ಶ್ರೀಮತಿ ಪಾರ್ವತಿಬಾಯಿ ಪ್ರಲ್ಹಾದಸಿಂಗ್ ದೊಡ್ಡಮಾನಿ | (i) 28.01.2022 ₹ 37,10,914/- (ಮೂವತ್ತೇಳು ಲಕ್ಷ ಹತ್ತು ಸಾವಿರದ ಒಂಭೈನೂರ ಹದಿನಾಲ್ಕು ರೂಪಾಯಿ ಮಾತ್ರ) 27.01.2022 ರಂತೆ (2) ಸಾಂಕೇತಿಕ ಸ್ವಾಧೀನತೆ 21.09.2022 & ಭೌತಿಕ ಸ್ವಾಧೀನತೆ 01.08.2023 | ₹ 52,45,498/- (ಐವತ್ತೆರಡು ಲಕ್ಷ ನಲವತ್ತೈದು ಸಾವಿರದ ನಾನ್ನೂರ ತೊಂಭತ್ತೆಂಟು ರೂಪಾಯಿ ಮಾತ್ರ) 18.12.2024 ರಂತೆ | ₹ 31,38,000/- (ಮೂವತ್ತೊಂದು ಲಕ್ಷ ಮೂವತ್ತೆಂಟು ಸಾವಿರ ರೂಪಾಯಿಗಳು ಮಾತ್ರ) | ₹ 3,13,800/- (ಮೂರು ಲಕ್ಷ ಹದಿಮೂರು ಸಾವಿರದ ಎಂಟುನೂರು ರೂಪಾಯಿಗಳು ಮಾತ್ರ) |

ಆಸ್ತಿ ವಿವರ / ಷೆಡ್ಯೂಲ್ : ಭೂಮಿ ಕಟ್ಟಡದ ಎಲ್ಲಾ ಭಾಗಗಳು ಸೇರಿದಂತೆ, ಸಿಟಿಎಸ್ ನಂ. 6338/5, ವಿಸ್ತೀರ್ಣ 143 ಯಾರ್ಡ್‌ಗಳು ಬೆಟಗೇರಿ ಗ್ರಾಮ ತಾಲೂಕು, ಗದಗ ಜಿಲ್ಲೆ ಇಲ್ಲಿದ್ದು, ಚಕ್ಕುಬಂದಿ: ಪೂರ್ವಕ್ಕೆ: ಎಸ್ ಆರ್ ದೊಡ್ಡಮಾನಿರವರಿಗೆ ಸೇರಿದ ಆಸ್ತಿ, ಪಶ್ಚಿಮಕ್ಕೆ: ಶಂಕರಪ್ಪ ಕುರಹಟ್ಟಿ ರವರಿಗೆ ಸೇರಿದ ಆಸ್ತಿ, ಉತ್ತರಕ್ಕೆ: ಇತರರಿಗೆ ಸೇರಿದ ಆಸ್ತಿ, ದಕ್ಷಿಣಕ್ಕೆ: ರಸ್ತೆ. ಒಟ್ಟಾಗಿ ಭೂಮಿ ಮತ್ತು ಕಟ್ಟಡ ಹಾಗೂ ಎಲ್ಲಾ ಅಪ್ಪುರ್ಟೆಂಟ್‌ಗಳು ಇದರಲ್ಲಿರುವುದು ಸೇರಿದಂತೆ.

ಇ-ಹರಾಜಿನ ದಿನಾಂಕ ಮತ್ತು ಸಮಯ: 17.01.2025, ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ

| ಬಿಡ್ ಸಲ್ಲಿಸಲು ಕೊನೆಯ ದಿನಾಂಕ | ಆಸ್ತಿ ಪರಿವೀಕ್ಷಣೆ ದಿನಾಂಕ ಮತ್ತು ಸಮಯ |
|---|---|
| 16.01.2025ರಂದು ಬೆಳಿಗ್ಗೆ 10.00 ರಿಂದ ಸಂಜೆ 5.00 ರ ನಡುವೆ | 15.01.2025ರಂದು ಬೆಳಿಗ್ಗೆ 10.00 ರಿಂದ ಸಂಜೆ 5.00 ರ ನಡುವೆ |

ಹೆಚ್ಚಿನ ಮಾಹಿತಿಗಾಗಿ ಬ್ಯಾಂಕ್‌ನ ಅಧಿಕೃತ ಅಧಿಕಾರಿಯವರನ್ನು ಸಂಪರ್ಕಿಸಿ: ಶ್ರೀ ನವರತ್ನ ಕುಮಾರ್ - 96633 84014 / ಶ್ರೀ ಟಿಜೊ ಎಮ್ ಸಾಜನ್ - 78451 92961

ಹರಾಜನ್ನು "ಎಲ್ಲಿ ಹೇಗಿದೆಯೋ ಹಾಗೆ" ಮತ್ತು "ಏನಿದೆಯೋ ಹಾಗೆ" ನಡೆಸಲಾಗುವುದು
ಹರಾಜನ್ನು ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಅನುಮೋದಿತ ಇ-ಹರಾಜು ಸೇವಾ ಪೂರೈಕೆದಾರ - ಮೆ॥ ಸಿ1 ಇಂಡಿಯಾ ಪ್ರೈ. ಲಿ., ಮೂಲಕ ನಡೆಸಲಾಗುವುದು. ಸಂಪರ್ಕ ವ್ಯಕ್ತಿ: ವಿನೋದ್ ಚೌಹಾನ್ (ಮೊ. ಸಂ. 98138 87931). ಅಪೇಕ್ಷಿತ ಬಿಡ್ಡುದಾರರು https://www.bankeauctions.com ಅಥವಾ https://www.ujjivanfb.in/e-auctions ಗೆ ಭೇಟಿ ನೀಡಿ ಆಸ್ತಿಗಳ ಹೆಚ್ಚಿನ ವಿವರಗಳನ್ನು ತಿಳಿದುಕೊಂಡು, ಬಿಡ್‌ನಲ್ಲಿ ಭಾಗವಹಿಸಬಹುದು ಹಾಗೂ ಅವರು ತಮ್ಮ ಹೆಸರನ್ನು https://www.bankeauctions.com ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡು ಉಚಿತವಾಗಿ ತಮ್ಮ ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆದುಕೊಳ್ಳಬಹುದು. ಅಪೇಕ್ಷಿತ ಬಿಡ್ಡುದಾರರು ಇಹರಾಜು ಬಗ್ಗೆ ಆನ್‌ಲೈನ್ ತರಬೇತಿಯನ್ನು ಸೇವಾ ಪೂರೈಕೆದಾರರಾದ ಮೆ॥ ಸಿ1 ಇಂಡಿಯಾ ಪ್ರೈ.ಲಿ., ಸಹಾಯವಾಣಿ ಸಂ.7291918824, 25, 26, ಸಪೋರ್ಟ್ ಇ-ಮೇಲ್ ಐಡಿ : support@bankeauctions.com ಹರಾಜು ಪೋರ್ಟಲ್ : https://www.bankeauctions.com.
ಮಾರಾಟದ ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ ಬ್ಯಾಂಕ್ / ಪೂರಕ ಭದ್ರತಾದಾರರ ವೆಬ್‌ಸೈಟ್‌ನಲ್ಲಿ ನೀಡಲಾದ ಲಿಂಕ್‌ನ್ನು ಆಧಾರ ಮಾಡಿಕೊಳ್ಳಿ
https://www.ujjivansfb.in/e-auctions / https://www.bankeauctions.com.
ಸಹಿ/-
ದಿನಾಂಕ: 25.12.2024, ಸ್ಥಳ: ಗದಗ
ಅಧಿಕೃತ ಅಧಿಕಾರಿ, ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್

Udayakala printed and published by **K.N. Puttalingaiah** on behalf of **Anikethana Publication and Printers** and Printed at M.N.S. PRINTERS PVT LTD. 345/4, Bhattarahalli Near K R Puram, RTO Old Madras Road, Bengaluru- 560049 ELEGANT OFFSET PRINTERSPVT LTD Plat No-33/1,15/1 (Eastern Part) MT Sagar Industrial Estate Gokul Road Hubballi -580030 **Editor: K N Puttalingaiah:** (Responsible for all the news printed). All rights reserved. Reproduction in whole or in part without written permission is prohibited.RNI REG NO. 71090/97.Volume:**05** Issue: **286**